**ಓ.ಎಸ್. ನಂಬರಃ 122/2021**

**ಪಿ. ಡಬ್ಲ್ಯೂಃ 1**

**(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 22-03-2025)**

**ಪಾಟೀ ಸವಾಲು : 3(ಎ) ಮತ್ತು 3(ಬ) ಪ್ರತಿವಾದಿಗಳ ಪರ ಶ್ರೀ ಜೆ ಡಿ ಬಿ ವಕೀಲರಿಂದ,**

ಈ ದಾವೆಯನ್ನು ಯಾವ ಸರ್ವೇ ನಂಬರಗಳಿಗೆ ಸಂಬಂಧಿಸಿದಂತೆ ದಾಖಲಿಸಲಾಗಿದೆ ಎಂಬ ಪ್ರಶ್ನೆಗೆ ಸಾಕ್ಷಿಯು ಬೈಲೂರು ಗ್ರಾಮದ ಸರ್ವೇ ನಂಬರ 463/4ಬ ರಲ್ಲಿರುವ 14 ಗುಂಟೆ

ಜಮೀನು ಮತ್ತು ಮಾವಳ್ಳಿ 1 ಗ್ರಾಮದ ಸರ್ವೇ ನಂಬರ 627/3 ರಲ್ಲಿರುವ 30 ಗುಂಟೆ ಹಾಗೂ ಮಾವಳ್ಳಿ 1 ಗ್ರಾಮದ ಸರ್ವೇ ನಂಬರ 627/6 ರಲ್ಲಿರುವ 8 ಗುಂಟೆ ಮತ್ತು ಮಾವಳ್ಳಿ 1 ಗ್ರಾಮದ ಸರ್ವೇ ನಂಬರ 634/1 ರಲ್ಲಿರುವ 1 ಎಕರೆ 11 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ದಾವೆ ದಾಖಲಿಸಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ಕುಟುಂಬದ ಆಸ್ತಿಯಲ್ಲಿ ಪಾಲು ಕೇಳಿ ಈ ದಾವೆ ದಾಖಲಿಸಿರುತ್ತೇನೆ.

2. ದಾವಾ ಆಸ್ತಿಗಳು ಮೂಲತಃ ನನ್ನ ಅಜ್ಜ ಗೋವಿಂದ @ ಗೊಯ್ಡಾ ಲಚ್ಮಯ್ಯ ನಾಯ್ಕರವರಿಗೆ ಸೇರಿದ ಆಸ್ತಿಯಾಗಿರುತ್ತದೆ. ಸದ್ರಿ ಗೋವಿಂದ @ ಗೊಯ್ಡಾ ಲಚ್ಮಯ್ಯ ನಾಯ್ಕರವರಿಗೆ ದಾವಾ ಆಸ್ತಿಗಳಲ್ಲಿ ಹೇಗೆ ಹಕ್ಕು ಬಂತು ಎಂಬ ಪ್ರಶ್ನೆಗೆ ಸಾಕ್ಷಿಯು ಹಕ್ಕು ಬಂದಿರುವುದಿಲ್ಲ, ಸಾಗುವಳಿ ಮಾಡುತ್ತಿದ್ದರು ಎಂದು ಉತ್ತರಿಸಿರುತ್ತಾರೆ. ಸದ್ರಿ ಗೋವಿಂದ @ ಗೊಯ್ಡಾ ಲಚ್ಮಯ್ಯ ನಾಯ್ಕರವರು ಸಾಗುವಳಿ ಮಾಡುತ್ತಿದ್ದರು ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿರುತ್ತೇನೆ. ಈ ದಾವೆಯಲ್ಲಿ ನಾನು ಹಾಜರುಪಡಿಸಿದ ದಾಖಲಾತಿಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನನ್ನ ಅಜ್ಜ ಗೋವಿಂದ @ ಗೊಯ್ಡಾ ಲಚ್ಮಯ್ಯ ನಾಯ್ಕರವರು ಸಾಗುವಳಿ ಮಾಡುತ್ತಿದ್ದ ಬಗ್ಗೆ ಸರ್ವೇ ನಂಬರ 463/4ಬ ದ ಆರ್ ಟಿ ಸಿ ಯಲ್ಲಿ ದಾಖಲಾಗಿರುತ್ತದೆ. ಅದೇ ರೀತಿ ದಾವಾ ಬ ಪರಿಶಿಷ್ಟದ ಆಸ್ತಿಗಳಲ್ಲಿ ನಾನು ಹೇಳುವಂತೆ ನನ್ನ ಅಜ್ಜ ಸಾಗುವಳಿ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲಾತಿಗಳು ಇರುವುದಿಲ್ಲ. ನಾನು ನನ್ನ ಅಜ್ಜ ಗೋವಿಂದ @ ಗೊಯ್ಡಾ ಲಚ್ಮಯ್ಯ ನಾಯ್ಕರವರನ್ನು ನೋಡಿರುವುದಿಲ್ಲ. ದಾವಾ ಬ ಪರಿಶಿಷ್ಟದ ಆಸ್ತಿಗಳಲ್ಲಿ ನನ್ನ ಅಜ್ಜ ಸಾಗುವಳಿ ಮಾಡುತ್ತಿದ್ದ ಬಗ್ಗೆ ನಾನು ನೋಡಿರುವುದಿಲ್ಲ. ನಿಪಿ-8 ಮ್ಯುಟೇಶನ್ ಎಂಟ್ರಿಯನ್ನು ಹೊರತುಪಡಿಸಿ ನನ್ನ ಅಜ್ಜ ದಾವಾ ಆಸ್ತಿಗಳಲ್ಲಿ ಸಾಗುವಳಿ ಮಾಡುತ್ತಿದ್ದರು ಎಂದು ತೋರಿಸಲು ಯಾವುದೇ ದಾಖಲಾತಿ ಇರುವುದಿಲ್ಲ.

3. ನಾನು ಶ್ರೀ ಮಾರಿ ಲಚ್ಮಯ್ಯ ನಾಯ್ಕರವರ ವಾರಸದಾರನಲ್ಲ ಎಂದರೆ ಸರಿ. ಮೃತ 3 ನೇ ಪ್ರತಿವಾದಿ ಮತ್ತು ಅವರ ಮಕ್ಕಳಾದ ಪ್ರತಿವಾದಿ ಸಂಖ್ಯೆ 3(ಎ) ರಿಂದ 3(ಸಿ) ರವರು ಸದ್ರಿ ಮಾರಿ ಲಚ್ಮಯ್ಯ ನಾಯ್ಕರವರ ವಾರಸುದಾರರು ಎಂದರೆ ಸರಿ. ಸದ್ರಿ ಮಾರಿ ಲಚ್ಮಯ್ಯ ನಾಯ್ಕರವರಿಗೆ ಸೇರಿದ ಸ್ವಂತ ಆಸ್ತಿಯಲ್ಲಿ ನಾನು ಮತ್ತು ಇತರ ವಾದಿಗಳು ಹಕ್ಕು ಕೇಳುವುದಿಲ್ಲ, ಕುಟುಂಬದ ಆಸ್ತಿಯಲ್ಲಿ ಹಕ್ಕು ಕೇಳುತ್ತಿದ್ದೇನೆ.

4. ನನ್ನ ಅಜ್ಜ ಗೋವಿಂದ @ ಗೊಯ್ಡಾ ಲಚ್ಮಯ್ಯ ನಾಯ್ಕರವರು ಮತ್ತು ಮಾರಿ ಲಚ್ಮಯ್ಯ ನಾಯ್ಕರವರು ಬಹಳ ಹಿಂದಿನಿಂದಲೂ ಅವರವರ ಆಸ್ತಿಗಳನ್ನು ಪ್ರತ್ಯೇಕವಾಗಿ ಗೇಣಿ ಪಡೆದುಕೊಂಡು ಸಾಗುವಳಿ ಮಾಡಿ ಬಂದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಜ್ಜ ಗೋವಿಂದ @ ಗೊಯ್ಡಾ

ಲಚ್ಮಯ್ಯ ನಾಯ್ಕುರವರು ಮತ್ತು ಮಾರಿ ಲಚ್ಮಯ್ಯ ನಾಯ್ಕುರವರು ಪ್ರತ್ಯೇಕ ಮನೆಗಳಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಾನು ಹೇಳುವಂತೆ ನನ್ನ ಅಜ್ಜ ಗೋವಿಂದ @ ಗೊಯ್ದಾ ಲಚ್ಮಯ್ಯ ನಾಯ್ಕುರವರು ಮತ್ತು ಮಾರಿ ಲಚ್ಮಯ್ಯ ನಾಯ್ಕುರವರು ಒಟ್ಟಾಗಿ ಒಂದೇ ಮನೆಯಲ್ಲಿ ವಾಸ ಮಾಡುತ್ತಿದ್ದರು ಎಂದು ತೋರಿಸಲು ನನ್ನ ಬಳಿ ದಾಖಲಾತಿ ಇರುವುದಿಲ್ಲ.

5. ಪ್ರಸ್ತುತ ನಾನು ಮತ್ತು ಇತರ ವಾದಿಗಳು ಹಾಗೂ ಮೃತ 3 ನೇ ಪ್ರತಿವಾದಿ, ಅವರ ಮಕ್ಕಳು ಒಟ್ಟಾಗಿ ವಾಸ ಮಾಡುತ್ತಿಲ್ಲ. ನಾವು ಪ್ರತ್ಯೇಕವಾಗಿ ಎಷ್ಟು ವರ್ಷಗಳಿಂದ ವಾಸ ಮಾಡುತ್ತಿದ್ದೇವೆಂದು ನನಗೆ ಗೊತ್ತಿಲ್ಲ. 1983 ನೇ ಇಸವಿಯಲ್ಲಿ ನನ್ನ ತಂದೆ ಮನೆ ಕಟ್ಟಿರುತ್ತಾರೆ. 1983 ನೇ ಇಸವಿಯಲ್ಲಿ ನನ್ನ ತಂದೆಗೆ ಎಷ್ಟು ವಯಸ್ಸಾಗಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಕುಟುಂಬದಿಂದ ಹೊರಗೆ ಬಂದಾಗ ಅವರಿಗೆ ಒಂದು ವರ್ಷ ಪ್ರಾಯ ಆಗಿತ್ತು ಎಂದು ವಾದ ಪತ್ರದಲ್ಲಿ ಬರೆಸಿದ್ದು ಅದು ಸರಿಯಾ ಎಂಬ ಪ್ರಶ್ನೆಗೆ ಸಾಕ್ಷಿಯು ನಿಜ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ನನ್ನ ತಂದೆ 2012 ನೇ ಇಸವಿಯಲ್ಲಿ ಮೃತರಾಗಿರುತ್ತಾರೆ. ನನ್ನ ತಂದೆ ಮೃತರಾದಾಗ ಅವರಿಗೆ ಅಂದಾಜು 60 ವರ್ಷ ವಯಸ್ಸಾಗಿರಬಹುದು.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ, ಭಟ್ಕಳ**